KADG220052882025

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನಗಿರಿ.**

**ಉಪಸ್ಥಿತರು**

**ಶ್ರೀಮತಿ.ಮಹಾಲಕ್ಷ್ಮೀ. ಜಿ**

ಎಂ.ಎ., ಎಲ್.ಎಲ್.ಬಿ.,

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಗಿರಿ.**

**ದಿನಾಂಕಃ 2 ನೇ ಮೇ 2026 ರಂದು ಉಚ್ಚರಿಸಲ್ಪಟ್ಟಿತು.**

**ಅಪರಾಧಿಕ ಪ್ರಕರಣ ಸಂಖ್ಯೆ: 3337/2025**

**ಕರ್ನಾಟಕ ಸರ್ಕಾರದ ಪರವಾಗಿ ಚನ್ನಗಿರಿ ಪೊಲೀಸ್ ಠಾಣೆ**

........ **ಪಿರ್ಯಾದಿ**

**ವಿರುದ್ಧ**

**1. ನಾಗರಾಜಪ್ಪ**

ತಂದೆಃ ನಿಂಗಪ್ಪ

ವಯಸ್ಸುಃ 73 ವರ್ಷ,

2. **ಧ್ರಾಕ್ಷಾಯಣಮ್ಮ**

ತಂದೆಃ ನಾಗರಾಜಪ್ಪ

ವಯಸ್ಸುಃ 64 ವರ್ಷ,

**3.** ಆನಂದ
ತಂದೆ: ನಾಗರಾಜಪ್ಪ
ವಯಸ್ಸು: 41 ವರ್ಷ,

**4.** ಮಂಜುನಾಥ
ತಂದೆ: ನಾಗರಾಜಪ್ಪ
ವಯಸ್ಸು: 44 ವರ್ಷ,

ಎಲ್ಲರ ವಿಳಾಸ: ಮಾರುತಿ ಸರ್ಕಲ್
ಚನ್ನಗಿರಿ ಟೌನ್ ಮತ್ತು ತಾಲ್ಲೂಕು
ದಾವಣಗೆರೆ ಜಿಲ್ಲೆ

........**ಆರೋಪಿತರು**

( **ಆರೋಪಿತರ ಪರ ಶ್ರೀ ಎಲ್ ಎನ್ ವಕೀಲರು**)

1. ಅಪರಾಧ ಪ್ರಾರಂಭವಾದ ದಿನಾಂಕ : 02-02-2025
2. ಅಪರಾಧ ವರದಿಯಾದ ದಿನಾಂಕ : 03-02-2025
3. ಅಪರಾಧಿ ಬಂಧನಕಾರಿಯಾದ ದಿನಾಂಕ : ---
4. ದೂರುದಾರರ ಹೆಸರು : ಶ್ರೀಮತಿ ಶಾಂತಮ್ಮ
5. ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ : 01-04-2026
6. ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ : 01-04-2026
7. ಅಪಾದನೆ ಕಲಂ : **ಭಾರತೀಯ ನ್ಯಾಯ ಸಂಹಿತೆ** (**Bharatiya Nyaya Sanhita**-2023) ಕಲಂ **115(2), 351(1), 74 ಸಹ ಕಲಂ** 3(5) **ರ ಅಡಿಯಲ್ಲಿ**
8. ನ್ಯಾಯಾಧೀಶರ ಅಭಿಪ್ರಾಯ : ನಿರ್ದೋಷಿಗಳು
9. ರಾಜ್ಯ ಸರ್ಕಾರ : ಸ.ಸ.ಅ., ರವರಿಂದ

10. ಆರೋಪಿ ಪರ ವಕೀಲರು : **ಶ್ರೀ ಎಲ್ ಎನ್ . ವಕೀಲರು.**

**(ಶ್ರೀಮತಿ. ಮಹಾಲಕ್ಷ್ಮೀ ಜಿ.)**
**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳು,**
**ಚನ್ನಗಿರಿ.**

## ತೀರ್ಪು

ಚನ್ನಗಿರಿ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಆರೋಪಿತರ ಮೇಲೆ **ಭಾರತೀಯ ನ್ಯಾಯ ಸಂಹಿತಾ – 2023** ಕಲಂ115(2), 351(1), 74 **ಸಹ ಕಲಂ 3(5) ರ ಅಡಿಯಲ್ಲಿ** ದಂಡನೀಯ ಅಪರಾಧವನ್ನು ಎಸಗಿದ್ದಾರೆಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರ.**

1 ನೇ ಆರೋಪಿಗೆ ಇಬ್ಬರು ಹೆಂಡತಿಯರಿದ್ದು ಚಾಸಾ–1 ರವರು ಮೊದಲನೇ ಹೆಂಡತಿಯಾಗಿರುತ್ತಾರೆ. ದಿನಾಂಕ:02.02.2025 ರಂದು ಬೆಳಿಗ್ಗೆ 09.00 ಗಂಟೆ ಸಮಯದಲ್ಲಿ ಚನ್ನಗಿರಿ ಪೊಲೀಸ್ ಠಾಣಾ ಸರಹದ್ದಿನ ಚನ್ನಗಿರಿ ಟೌನಿನ ಮಾರುತಿ ಸರ್ಕಲ್ ನಲ್ಲಿ ಇರುವ ತನ್ನ ಮನೆಯ ಮುಂದೆ ಚಾಸಾ–1 ರವರು ಇರುವಾಗ ಆರೋಪಿತರು ಚಾಸಾ.1 ರವರಿಗೆ 'ಮನೆಯನ್ನು ಬಿಟ್ಟು ಹೋಗು, ಈ ಊರಿನಲ್ಲಿ ಇರುವಂತಿಲ್ಲ' ಎಂದು ಜಗಳ ಮಾಡಿ ಕುತ್ತಿಗೆ ಹಿಡಿದು ಕೊಲೆಯ ಪ್ರಯತ್ನ ಮಾಡಿ ಮೈ

ಕೈಗೆ ಹೊಡೆದು ಸಾಧಾರಣ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಜಗಳವನ್ನು ಬಿಡಿಸಲು ಬಂದ ಚಾಸಾ.4, ಚಾಸಾ.5, ಚಾಸಾ.7 ರವರಿಗೂ ಹಿಡಿದು ಎಳೆದಾಡಿ ಕೈ ಕಾಲುಗಳಿಂದ ಹೊಡೆದು ಸಾಧಾರಣ ಸ್ವರೂಪದ ಗಾಯವನ್ನುಂಟು ಮಾಡಿ 'ಈ ಮನೆ ಮತ್ತು ಈ ಊರನ್ನು ಬಿಟ್ಟು ಹೋಗದೇ ಇದ್ದರೇ ನಿಮ್ಮನ್ನು ಯಾವುದೇ ಕಾರಣಕ್ಕೂ ಬಿಡುವುದಿಲ್ಲ, ಕೊಲೆ ಮಾಡುತ್ತೇವೆ' ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ಜಗಳದ ವಿಚಾರ ತಿಳಿದು ಚಾಸಾ.6 ರವರು ಮನೆಯ ಬಳಿ ಬಂದಾಗ ಅವರಿಗೂ ಸಹ 1 ರಿಂದ 4 ನೇ ಆರೋಪಿತರು ಹಲ್ಲೆ ಮಾಡಿರುತ್ತಾರೆ ಎಂಬುದು ಅಭಿಯೋಜನೆಯ ಪ್ರಕರಣವಾಗಿರುತ್ತದೆ.

3. ಘಟನೆಯ ತರುವಾಯ ಚಾಸಾ-1 ರವರು ನೀಡಿದ ದೂರಿನನ್ವಯ ಚಾಸಾ.13 ರವರು ಚನ್ನಗಿರಿ ಪೋಲಿಸ್ ಠಾಣೆ ಗುನ್ನಾ ಸಂ: 65/2025 ರಂತೆ **ಭಾರತೀಯ ನ್ಯಾಯ ಸಂಹಿತೆ – 2023** ಕಲಂ **115(2), 329(4), 351(1), 74 ಸಹ ಕಲಂ 3(5) ರ ಅಡಿಯಲ್ಲಿ** ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು, ಸ್ಥಳ ಪರಿಶೀಲನೆ ಮಾಡಿ ಸಾಕ್ಷಿದಾರರ ಹೇಳಿಕೆಗಳನ್ನು ಕಲೆ ಹಾಕಿ ಆರೋಪಿತರ ಮೇಲೆ **ಭಾರತೀಯ ನ್ಯಾಯ ಸಂಹಿತೆ – 2023** ಕಲಂ **ಕಲಂ115(2), 351(1), 74 ಸಹ ಕಲಂ 3(5) ರ ಅಡಿಯಲ್ಲಿ** ದಂಡನೀಯವಾದ ಅಪರಾಧವನ್ನೆಸಗಿರುತ್ತಾರೆಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

4. ಆರೋಪಿತರಿಗೆ ಸಮನ್ಸನ್ನು ಹೊರಡಿಸಿ ಹಾಜರಾತಿಯನ್ನು ಪಡೆಯಲಾಗಿದ್ದು, ಸದರಿಯವರು ಜಾಮೀನನ್ನು ಪಡೆದು ವಿಚಾರಣೆಗೊಳಪಟ್ಟಿರುತ್ತಾರೆ. ತದನಂತರ ಆರೋಪಿತರ ಅಹವಾಲನ್ನು ಆಲಿಸಿ, ದೋಷಾರೋಪಣೆಗಳನ್ನು ರಚಿಸಿ, ಅವರು ತಿಳಿಯುವ ಭಾಷೆಯಲ್ಲಿ ಓದಿ ಹೇಳಿ, ಅವರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ. ಅವರು ಅವುಗಳನ್ನು ಅಲ್ಲಗಳೆದು ವಿಚಾರಣೆಗೊಳಪಡಿಸುವಂತೆ ಕೋರಿದ ಮೇರೆಗೆ ಅಭಿಯೋಜನೆಯ ಸಾಕ್ಷ್ಯಗಳನ್ನು ವಿಚಾರಣೆಗೊಳಪಡಿಸಲಾಗಿರುತ್ತದೆ.

5. ಅಭಿಯೋಜನೆಯು ಅಂತಿಮ ವರದಿಯಲ್ಲಿನ ಒಟ್ಟು 14 ಸಾಕ್ಷಿದಾರರ ಪೈಕಿ 3 ಸಾಕ್ಷಿದಾರರಾದ ಚಾಸಾ.1 ಶಾಂತಮ್ಮ ರವರನ್ನು ಫ್ರಾಸಾ.1 ರಂತೆ , ಚಾಸಾ.4 ಸುಧಾ ರವರನ್ನು ಫ್ರಾಸಾ.2 ರಂತೆ ಮತ್ತು ಚಾಸಾ.5 ಸುಮ ರವರನ್ನು ಫ್ರಾಸಾ.3 ರಂತೆ ವಿಚಾರಣೆಗೊಳಪಡಿಸಿರುತ್ತಾರೆ. ಅಲ್ಲದೇ ನಿಪಿ.1 ರಿಂದ 5 ರಂತೆ ದಾಖಲಾತಿ ಸಾಕ್ಷ್ಯಗಳು ಕೂಡ ನಿಶಾನೆಗೊಳಪಟ್ಟಿರುತ್ತವೆ.

6 ಅಭಿಯೋಜನೆಯ ಸಾಕ್ಷ್ಯದ ವಿಚಾರಣೆಯ ಬಳಿಕ, ಅವುಗಳಲ್ಲಿ ಆರೋಪತರ ಅಪರಾಧವನ್ನು ಸೂಚಿಸುವ ಸಾಕ್ಷ್ಯಗಳಿಲ್ಲದಿರುವುದರಿಂದ **ಭಾರತೀಯ ನ್ಯಾಯ ಸಂಹಿತೆ – 2023 ಕಲಂ 351** ರ ಅಡಿಯಲ್ಲಿ ಆರೋಪಿತರ ಹೇಳಿಕೆಯನ್ನು ವಿನಾಯಿತಿಸಲಾಗಿರುತ್ತದೆ.

7. ಮಾನ್ಯ ಅಭಿಯೋಜಕರ ಹಾಗೂ ಆರೋಪಿ ಪರ ವಕೀಲರ ಅಂತಿಮ ವಾದವನ್ನು ಆಲಿಸಲಾಯಿತು. ದಾಖಲಾತಿಗಳನ್ನು ಪರಿಶೀಲಿಸಲಾಯಿತು.

8. ಪ್ರಕರಣದ ತೀರ್ಮಾನಕ್ಕಾಗಿ ಈ ಕೆಳಗಿನಂತೆ ಅಂಶಗಳು ಉದ್ಭವಿಸುತ್ತವೆ.

**ಅಂಶಗಳು**

1. ಮೊದಲನೆಯದಾಗಿ ದಿ: 02.02.2025 ರಂದು ಬೆಳಗ್ಗೆ 9.00 ಗಂಟೆ ಸಮಯದಲ್ಲಿ ಚನ್ನಗಿರಿ ಪೊಲೀಸ್ ಠಾಣಾ ಸರಹದ್ದಿನ ಚನ್ನಗಿರಿ ಟೌನಿನ ಮಾರುತಿ ಸರ್ಕಲ್ ನಲ್ಲಿ ಇರುವ ತನ್ನ ಮನೆಯ ಮುಂದೆ ಚಾಸಾ.1 ರವರು ಇರುವಾಗ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.1 ರವರ ಕುತ್ತಿಗೆ ಹಿಡಿದು ಎಳೆದಾಡಿ ಹಾಗೂ ಜಗಳ ಬಿಡಿಸಲು ಬಂದ ಚಾಸಾ.7 ರವರನ್ನು ಹಿಡಿದು ಎಳೆದಾಡಿ ಮಾನಕ್ಕೆ ಕುಂದುಂಟಾಗುವಂತೆ ವರ್ತಿಸುವ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.74 ಸಹ ವಾಚಕ ಕಲಂ.3(5) ರ ಅಡಿಯಲ್ಲಿ ದಂಡನೀಯ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸಿದ್ದಾರೆಯೇ?

2. ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.1, ಚಾಸಾ.4 ರಿಂದ ಚಾಸಾ.6 ರವರಿಗೆ ಕೈ ಕಾಲುಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯ ಪಡಿಸುವ ಮೂಲಕ, ಭಾರತೀಯ ನ್ಯಾಯ ಸಂಹಿತೆ ಕಲಂ. 115(2) ಸಹ ವಾಚಕ

ಕಲಂ.3(5) ರ ಅಡಿಯಲ್ಲಿ ದಂಡನೀಯ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸಿದ್ದಾರೆಯೇ?

3. ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಸಮಾನ ಉದ್ದೇಶದಿಂದ ಆರೋಪಿತರು ಚಾಸಾ.1, ಚಾಸಾ.4 ಮತ್ತು ಚಾಸಾ.5 'ಈ ಮನೆ ಮತ್ತು ಊರನ್ನು ಬಿಟ್ಟು ಹೋಗದೇ ಇದ್ದರೇ ನಿಮ್ಮನ್ನು ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಕೊಲೆ ಮಾಡುತ್ತೇವೆ' ಎಂದು ಜೀವ ಬೆದರಿಕೆ ಹಾಕುವ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ. 324(3) ಸಹ ವಾಚಕ ಕಲಂ.3(5) ರ ಅಡಿಯಲ್ಲಿ ದಂಡನೀಯ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸಿದ್ದಾರೆಯೇ?

4. ಆದೇಶ ಏನು?

9. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿದೆ.

ಅಂಶ ಸಂಖ್ಯೆ 1 ರಿಂದ 3 : ನಕಾರಾತ್ಮಕವಾಗಿ,
ಅಂಶ ಸಂಖ್ಯೆ 4 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ

**ಕಾರಣಗಳು**

10. **ಅಂಶ ಸಂಖ್ಯೆ 1 ರಿಂದ 3 :** ಈ ಎಲ್ಲಾ ಅಂಶಗಳು ಒಂದೇ ಘಟನೆಗೆ ಸಂಬಂಧಿಸಿದ್ದರಿಂದ, ಸಂಗತಿಗಳ ಮತ್ತು ಸಾಕ್ಷ್ಯಗಳ ಹಾಗೂ ಅವುಗಳಿಗೆ ನೀಡಲಾಗುವ

ಕಾರಣಗಳ ಪುನರಾವರ್ತನೆ ತಪ್ಪಿಸುವ ಸಲುವಾಗಿ, ಸದರಿ ಅಂಶಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ಆರೋಪಿತರ ಮೇಲಿನ ಅಪರಾಧವನ್ನು ಸೂಚಿಸುವ ಎಲ್ಲಾ ಅಂಶಗಳನ್ನು ರುಜುವಾತು ಮಾಡಲು ಅಂತಿಮ ವರದಿಯಲ್ಲಿನ ಒಟ್ಟು 14 ಸಾಕ್ಷಿದಾರರ ಪೈಕಿ 3 ಸಾಕ್ಷ್ಯಿದಾರರನ್ನು ಫ್ರಾಸಾ.1 ರಿಂದ 3 ರಂತೆ ಅಭಿಯೋಜನೆಯವರು ವಿಚಾರಣೆಗೊಳಪಡಿಸಿರುತ್ತಾರೆ. ಅದರಂತೆ ದೂರುದಾರರಾದ ಚಾಸಾ.1 ಶಾಂತಮ್ಮ ರವರನ್ನು ಫ್ರಾಸಾ.1 ರಂತೆ , ಬಾಧಿತ ಸಾಕ್ಷಿದಾರರಾದ ಚಾಸಾ.4 ಸುಧಾ ರವರನ್ನು ಫ್ರಾಸಾ.2 ರಂತೆ ಮತ್ತು ಚಾಸಾ.5 ಸುಮ ರವರನ್ನು ಫ್ರಾಸಾ.3 ರಂತೆ ವಿಚಾರಣೆಗೊಳಪಡಿಸಿರುತ್ತಾರೆ.

12. ಈ ಮೇಲಿನ ಸಾಕ್ಷಿಗಳ ವಿಚಾರಣೆಯ ಕಾಲಕ್ಕೆ ಗುರುತಿಗೊಳಪಟ್ಟ ದಾಖಲೆಗಳು ನಿಪಿ.1 ರಿಂದ 5 ರಂತಿದ್ದು, ನಿಪಿ.1/ದೂರು, ನಿಪಿ.1(ಎ)/ಸಹಿ, ನಿಪಿ.2/ಕೃತ್ಯ ನಡೆದ ಸ್ಥಳ ಪಂಚನಾಮೆ, ನಿಪಿ.2(ಎ)/ಸಹಿ, ನಿಪಿ.3/ಭಾವಚಿತ್ರ, ನಿಪಿ.4 ಮತ್ತು 5/ಫ್ರಾಸಾ.2 ಮತ್ತು 3 ರವರ ಅಲ್ಲಗಳೆದ ಹೇಳಿಕೆಗಳಾಗಿವೆ.

13. ಪ್ರಸ್ತುತ ಪ್ರಕರಣದಲ್ಲಿ ಆರೋಪಿತರ ಮೇಲೆ ಆರೋಪಿಸಲಾಗಿರುವ ಆರೋಪಗಳನ್ನು ಸಾಬೀತುಪಡಿಸಲು ಅಭಿಯೋಜನೆಯು ದೂರುದಾರರಾದ ಚಾಸಾ.1 ಶಾಂತಮ್ಮ ರವರನ್ನು ಫ್ರಾಸಾ.1 ರಂತೆ ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ,ಚಾಸಾ-4 ರಿಂದ 6 ತನ್ನ ಮಕ್ಕಳು.

ಚಾಸಾ-7 ತನ್ನ ಸೊಸೆ. ಚಾಸಾ-8 ಮತ್ತು 9 ತನಗೆ ಪರಿಚಿತರು. 1 ನೇ ಅರೋಪಿ ತನ್ನ ಗಂಡ, 2 ನೇ ಅರೋಪಿ ತನ್ನ ತಂಗಿ ಉಳಿದ ಆರೋಪಿತರು 1 ನೇ ಆರೋಪಿಯ ಮಕ್ಕಳು. ಅರೋಪಿತರು ತನಗೆ ಕೈ ಕಾಲುಗಳಿಂದ ಹೊಡೆದು ಹಲ್ಲೆ ಮಾಡಿಲ್ಲ. ಸಾರ್ವಜನಿಕವಾಗಿ ಅವಮಾನಪಡಿಸಿಲ್ಲ, ಕೊಲೆ ಬೆದರಿಕೆ ಹಾಕಿಲ್ಲ. ಆರೋಪಿತರಿಗೂ ಮತ್ತು ತನಗೆ ಬಾಯಿ ಮಾತಿನ ಜಗಳವಾಗಿದ್ದು ಬಗೆಹರಿಸಿಕೊಳ್ಳಲು ತಾನು ಠಾಣೆಗೆ ಹೋಗಿದ್ದಾಗ ಪೋಲೀಸರು ಕೆಲವು ದಾಖಲೆಗಳ ಮೇಲೆ ತನ್ನ ಸಹಿಗಳನ್ನು ಪಡೆದಿದ್ದು , ಅವುಗಳು ಯಾವ ದಾಖಲೆಗಳು ಎಂದು ತನಗೆ ಗೊತ್ತಿಲ್ಲ. ತಾನು ಚಿಕಿತ್ಸೆಯನ್ನು ಪಡೆದುಕೊಂಡಿಲ್ಲ. ನಿಪಿ.1 ರಂತೆ ನಿಶಾನೆಗೊಳಗಾದ ದೂರಿನಲ್ಲಿನ ಸಹಿಯನ್ನು ಗುರುತಿಸಿದ್ದು, ಅದರಲ್ಲಿ ಬರೆದ ವಿಚಾರ ತನಗೆ ಗೊತ್ತಿಲ್ಲ, ಅದನ್ನು ಯಾರು, ಯಾವಾಗ, ಯಾವ ವಿಚಾರವಾಗಿ ಬರೆದರು ಎಂದು ತನಗೆ ಗೊತ್ತಿಲ್ಲ, ನಿಪಿ.2 ರಂತೆ ನಿಶಾನೆಗೊಳಗಾದ ಮಹಜರ್ ನಲ್ಲಿನ ಸಹಿಯನ್ನು ಗುರುತಿಸಿದ್ದು,ಅದರಲ್ಲಿ ಬರೆದಿರುವ ವಿಚಾರ ತನಗೆ ಗೊತ್ತಿಲ್ಲ , ಅದನ್ನು ಯಾರು, ಯಾವ ವಿಚಾರಕ್ಕಾಗಿ ಬರೆದರು ಎಂದು ತನಗೆ ಗೊತ್ತಿಲ್ಲ, ಪೊಲೀಸರು ಏನನ್ನು ವಶಪಡಿಸಿಕೊಂಡಿಲ್ಲ. ನಿಪಿ-3 ರಂತೆ ನಿಶಾನೆಗೊಳಗಾದ ಭಾವಚಿತ್ರದಲ್ಲಿ ತಾನು ಪೋಲೀಸರ ಕೋರಿಕೆಯ ಮೇರೆಗೆ ನಿಂತಿರುವುದಾಗಿ, ಪೊಲೀಸರ ಕೋರಿಕೆಯ ಮೇರೆಗೆ ಸದರಿ ಭಾವಚಿತ್ರಕ್ಕೆ ನಿಂತಿರುತ್ತೇನೆ. ತಾನು ಯಾವುದೇ ಚಿಕಿತ್ಸೆ ಪಡೆದಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

15. ಸದರಿ ಸಾಕ್ಷಿಯನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀಸವಾಲಿಗೆ ಒಳಪಡಿಸಿದಾಗ ಆರೋಪಿತರ ಮೇಲೆ ಆರೋಪಿಸಲಾಗಿರುವ ಆರೋಪಗಳನ್ನು ದೃಢಪಡಿಸುವಂತಹ ಅಭಿಯೋಜಕರು ಸೂಚಿಸಿದ ಎಲ್ಲಾ ಸೂಚನೆಗಳನ್ನು ಸಾಕ್ಷಿ ಅಲ್ಲಗಳೆದಿರುತ್ತಾರೆ.

ಇನ್ನು ಈ ಪ್ರಕರಣದ ಬಾಧಿತ ಸಾಕ್ಷಿದಾರರಾದ ಚಾಸಾ.4 ಸುಧಾ ಮತ್ತು ಚಾಸಾ.5 ಸುಮ ರವರನ್ನು ಫ್ರಾಸಾ.2 ಮತ್ತು 3 ರಂತೆ ರಂತೆ ವಿಚಾರಣೆಗೆ ಒಳಪಡಿಸಿರುತ್ತಾರೆ. ಸದರಿ ಫ್ರಾಸಾ.2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ-1 ತನ್ನ ತಾಯಿ, ಚಾಸಾ-5 ತನ್ನ ತಂಗಿ. ಚಾಸಾ-6 ತನ್ನ ತಮ್ಮ, ಚಾಸಾ-7 ಚಾಸಾ-6 ರವರ ಹೆಂಡತಿ ಚಾಸಾ-8 ಮತು 9 ತನಗೆ ಪರಿಚಿತರು. 1 ನೇ ಆರೋಪಿ ತನ್ನ ತಂದೆ, 2 ನೇ ಅರೋಪಿ ತನ್ನ ಚಿಕ್ಕಮ್ಮ, 3 ಮತ್ತು 4 ನೇ ಅರೋಪಿತರು ತನ್ನ ಅಣ್ಣಂದಿರು. ಅರೋಪಿತರು ತನ್ನ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ, ಯಾವುದೇ ಹೇಳಿಕೆ ನೀಡಿಲ್ಲ, ಮತ್ತು ತಾನು ಯಾವುದೇ ಚಿಕಿತ್ಸೆ ಪಡೆದಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಸದರಿ ಫ್ರಾಸಾ.3 ರವರೂ ಸಹ ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ-1 ತನ್ನ ತಾಯಿ, ಚಾಸಾ-4 ತನ್ನ ಅಕ್ಕ, ಚಾಸಾ-6 ತನ್ನ ತಮ್ಮ ಚಾಸಾ-7 ಚಾಸಾ-6 ರವರ ಹೆಂಡತಿ ಚಾಸಾ-8 ಮತ್ತು 9 ತನಗೆ ಪರಿಚಿತರು. 1 ನೇ ಆರೋಪಿ ತನ್ನ ತಂದೆ, 2 ನೇ ಅರೋಪಿ ತನ್ನ ಚಿಕ್ಕಮ್ಮ, 3 ಮತ್ತು 4 ನೇ ಅರೋಪಿತರು ತನ್ನ ಅಣ್ಣಂದಿರು.

ಅರೋಪಿತರು ತನ್ನ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ, ಯಾವುದೇ ಹೇಳಿಕೆ ನೀಡಿಲ್ಲ ಮತ್ತು ಯಾವುದೇ ಚಿಕಿತ್ಸೆ ಪಡೆದಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

15. ಸದರಿ ಸಾಕ್ಷಿದಾರರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀಸವಾಲಿಗೆ ಒಳಪಡಿಸಿದಾಗ ಆರೋಪಿತರ ಮೇಲೆ ಆರೋಪಿಸಲಾಗಿರುವ ಆರೋಪಗಳನ್ನು ದೃಢಪಡಿಸುವಂತಹ ಅಭಿಯೋಜಕರು ಸೂಚಿಸಿದ ಎಲ್ಲಾ ಸೂಚನೆಗಳನ್ನು ಸಾಕ್ಷಿದಾರರು ಅಲ್ಲಗಳೆದಿರುತ್ತಾರೆ. ಸದರಿಯವರ ಅಲ್ಲಗಳೆದ ಹೇಳಿಕೆಯನ್ನು ನಿಪಿ-4 ಮತ್ತು 5 ರಂತೆ ನಿಶಾನೆಗೊಳಿಸಿದೆ. ಆರೋಪಿತರೊಂದಿಗೆ ತಾನು ರಾಜೀ ಮಾಡಿಕೊಂಡಿರುವ ಸೂಚನೆಯನ್ನು ಒಪ್ಪಿರುತ್ತಾರೆ.

16. ಈ ಎಲ್ಲಾ ಸಾಕ್ಷ್ಯಾಧಾರಗಳನ್ನು ಕ್ರೋಢೀಕರಿಸಿ ಕೂಲಂಕುಷವಾಗಿ ಪರಿಶೀಲಿಸಲಾಗಿ ಪ್ರಾ.ಸಾ.1 ರಿಂದ 3 ರವರು ತಾವು ಕೊಟ್ಟ ದೂರು, ಮಹಜರ್ ಮತ್ತು ಹೇಳಿಕೆಗಳಿಗೆ ತದ್ವಿರುದ್ಧವಾಗಿ ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿದ್ದು, ಪ್ರಾಸಾ.1 ರಿಂದ 3 ರವರು ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಅಭಿಯೋಜನೆಯು ಪಾಟೀಸವಾಲು ಮಾಡಿದರೂ ಸಹ ನಿಪಿ.1 ರಿಂದ 5 ರಲ್ಲಿರುವ ದಾಖಲೆಗಳಲ್ಲಿನ ಅಂಶಗಳನ್ನು ಹೊರತರುವಲ್ಲಿ

ಯಶಸ್ವಿಯಾಗಿರುವುದಿಲ್ಲ. ಅಲ್ಲದೇ ಫ್ರಾಸಾ.1 ರಿಂದ 3 ರವರು ತಮ್ಮ ದಾಖಲಾತಿ ಸಾಕ್ಷ್ಯಗಳಿಗೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ.

17. ಅಪರಾಧಿಕ ನ್ಯಾಯಶಾಸ್ತ್ರದ ಸಿದ್ಧಾಂತದಂತೆ ಅಪರಾಧಿಯನ್ನು ನಿರ್ದೋಷಿಯೆಂದು ಪೂರ್ವಭಾವನೆಯೊಂದಿಗೆ ಕಾಣಬೇಕಾಗುತ್ತದೆ. ಆರೋಪಿತರ ಮೇಲೆ ಹೊರಿಸಲಾದಂತಹ ದೋಷಾರೋಪಣೆಗಳನ್ನು ಸಂಶಯಾತೀತವಾಗಿ ರುಜುವಾತು ಪಡಿಸುವವರೆಗೂ, ಅವರು ನಿರ್ದೋಷಿಯೆಂಬ ಪೂರ್ವ ಕಲ್ಪನೆ ಕಾನೂನಿನಲ್ಲಿ ಇರುತ್ತದೆ. ಸದರಿ ಪೂರ್ವ ಭಾವನೆಯನ್ನು ತೊಡೆದು ಹಾಕಿ ಆರೋಪಿತರ ಮೇಲಿನ ಅಪರಾಧಗಳನ್ನು ರುಜುವಾತು ಪಡಿಸುವುದು ಅಭಿಯೋಜನೆಯ ಹೊಣೆಗಾರಿಕೆ ಮತ್ತು ರುಜುವಾತಿನ ಭಾರವಾಗಿದ್ದು, ಅಭಿಯೋಜನೆಯವರು ತಮ್ಮ ಸದರಿ ಹೊಣೆಗಾರಿಕೆಯನ್ನು ಸಂಶಯಾತೀತವಾಗಿ ರುಜುವಾತುಪಡಿಸಬೇಕಾಗುತ್ತದೆ. ಅಭಿಯೋಜನೆಯ ಪ್ರಕರಣದಲ್ಲಿ ಕಂಡು ಬರತಕ್ಕಂತಹ ಸಂಶಯದ ಲಾಭಗಳನ್ನು ಆರೋಪಿತರಿಗೆ ಕೊಡುವುದು ನ್ಯಾಯಶಾಸ್ತ್ರದ ಸಿದ್ಧಾಂತವಾಗಿದ್ದು ಮತ್ತು ಅದು ಕಾನೂನಾತ್ಮಕವಾಗಿರುತ್ತದೆ. ಅದ್ದರಿಂದ ಅಭಿಯೋಜನೆಯು ಈ ಪ್ರಕರಣದಲ್ಲಿ ಆರೋಪಿತರ ಮೇಲೆ ಆರೋಪಿಸಲಾದ ಆರೋಪಗಳನ್ನು ಸಂದೇಹಾತೀತವಾಗಿ ಸಾಬೀತು ಪಡಿಸಲು ವಿಫಲವಾಗಿದೆ ಎಂದು ಅಭಿಪ್ರಾಯ ಪಡುತ್ತಾ **1 ರಿಂದ 3 ನೇ ಅಂಶಗಳನ್ನು ನಕಾರಾತ್ಮಕವಾಗಿ** ಈ ನ್ಯಾಯಾಲಯವು ಉತ್ತರಿಸುತ್ತದೆ.

18. **<u>ಅಂಶ ಸಂಖ್ಯೆ 4:-</u>** ಅಂಶ ಸಂಖ್ಯೆ 1 ರಿಂದ **3** ರಲ್ಲಿ ತಿಳಿಸಿರುವ ಕಾರಣಗಳಿಂದಾಗಿ ಈ ಕೆಳಗಿನ ಅಂತಿಮ ಆದೇಶ ಮಾಡಲಾಗಿದೆ.

**<u>ಆದೇಶ</u>**

**ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ – 2023 ಕಲಂ 271(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಭಾರತೀಯ ನ್ಯಾಯ ಸಂಹಿತೆ – 2023 ಕಲಂ 115(2), 351(1), 74 ಸಹ ಕಲಂ 3(5) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳಿಗೆ ಆರೋಪಿತರನ್ನು ನಿರಪರಾಧಿಗಳೆಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.**

**ಆರೋಪಿತರ ಮತ್ತು ಜಾಮೀನುದಾರನ ಮುಚ್ಚಳಿಕೆಗಳನ್ನು ಮೇಲ್ಮನವಿ ಅವಧಿಯ ತರುವಾಯ ರದ್ದು ಪಡಿಸುವಂತೆ ಆದೇಶಿಸಲಾಗಿದೆ.**

(ಮೇಲಿನ ತೀರ್ಪನ್ನು ಶೀಘ್ರಲಿಪಿಗಾರಳಿಗೆ ಉಖ್ತಲೇಕನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕ: **2 ನೇ ಮೇ** 2026 ರಂದು ತೆರೆದ ನ್ಯಾಯಾಲಯದಲ್ಲಿ ಉಚ್ಚರಿಸಲ್ಪಟ್ಟಿತ್ತು)

**(ಶ್ರೀಮತಿ. ಮಹಾಲಕ್ಷ್ಮೀ ಜಿ.)**
**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳು,**
**ಚನ್ನಗಿರಿ.**

:ಅನುಬಂಧ:

1. **ಅಭಿಯೋಜನೆಯ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರಃ**

ಪಿಡಬ್ಲೂ–1 : ಶಾಂತಮ್ಮ

ಪಿಡಬ್ಲೂ–2 : ಸುಧಾ

ಪಿಡಬ್ಲೂ–3 : ಸುಮ

2. **ಅಭಿಯೋಜನೆಯ ಪರವಾಗಿ ಗುರುತಿಸಿದ ದಾಖಲಾತಿಗಳ ವಿವರಃ**

| | | |
|---|---|---|
| ನಿಪಿ.1 | : | ದೂರು, |
| ನಿಪಿ.1(ಎ) | : | ಸಹಿ, |
| ನಿಪಿ.2 | : | ಕೃತ್ಯ ನಡೆದ ಸ್ಥಳ ಪಂಚನಾಮೆ, |
| ನಿಪಿ.2(ಎ) | : | ಸಹಿ, |
| ನಿಪಿ.3 | : | ಭಾವಚಿತ್ರ |
| ನಿಪಿ.4 ಮತ್ತು 5 | : | ಫ್ರಾಸಾ.2 ಮತ್ತು 3 ರವರ ಅಲ್ಲಗಳೆದ ಹೇಳಿಕೆಗಳು |

3. **ಆರೋಪಿ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರಃ**

ಇಲ್ಲ

4. **ಆರೋಪಿ ಪರವಾಗಿ ಗುರುತಿಸಿಕೊಂಡ ದಾಖಲೆಗಳ ವಿವರಃ**

ಇಲ್ಲ

5. **ಮುದ್ದೆಮಾಲಿನ/ಜಪ್ತಾದ ವಸ್ತುಗಳ ಬಗ್ಗೆ ವಿವರಃ**

**ಇಲ್ಲ**

**(ಶ್ರೀಮತಿ. ಮಹಾಲಕ್ಷ್ಮೀ. ಜೆ)**
**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳು,**
**ಚನ್ನಗಿರಿ.**